ಮು. ಕಾರ್ಯದ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರು ರವರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು - 560002

080-22237455/22221286 comm@bbmp.gov.in

ಸಂಖ್ಯೆ: ಬಿ12(1ಬಿ)/ಪಿಆರ್/40/2023-24 ದಿನಾಂಕ: 15.11-23

## ಕಛೇರಿ ಆದೇಶ

**ವಿಷಯ:** ಎಲ್ಲಾ ವಲಯ ಆಯುಕ್ತರು ಮತ್ತು ಅಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜನೆ ಮಾಡುವ ಕುರಿತು.

**ಉಲ್ಲೇಖ:** 1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾಯ್ದೆ-2020.

2. ಇದೇ ವಿಷಯಕ್ಕೆ ಸಂಬಂಧಿಸಿದಂತೆ ಹೊರಡಿಸಿರುವ ಕಛೇರಿ ಆದೇಶ ಸಂಖ್ಯೆ:ಬಿ12(1)/ಪಿಆರ್/394/2022-23 ದಿನಾಂಕ: 18-01-2022.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 112 ಎಂಎನ್‌ವೈ 2019, ದಿನಾಂಕ:16-09-2019, 29-06-2020 ಮತ್ತು 27-10-2020ರ ಆದೇಶದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾಯ್ದೆ 2020, ಸೆಕ್ಷನ್ 64, 65, 66 ಮತ್ತು 67ರ ಅಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮುಖ್ಯ ಆಯುಕ್ತರ ಕಾರ್ಯದ ಹೊರೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ 8 ವಲಯಗಳನ್ನು ಮುಖ್ಯ ಆಯುಕ್ತರ ಕಾರ್ಯ ಪರಿಧಿಯಿಂದ ಬಿಡುಗಡೆಗೊಳಿಸಿ ವಲಯ ಆಯುಕ್ತರು / ವಿಶೇಷ ಆಯುಕ್ತರುಗಳಿಗೆ ನೀಡಲಾಗಿರುತ್ತದೆ.

ಅದರಂತೆ, ಆಡಳಿತ ಶಾಖೆಯ ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಿಸಿದಂತೆ ವಲಯ ಆಯುಕ್ತರು / ವಿಶೇಷ ಆಯುಕ್ತರು / ಅಪರ-ಜಂಟಿ ಆಯುಕ್ತರು / ಉಪ ಆಯುಕ್ತರು ರವರುಗಳಿಗೆ ಯಾವುದೇ ನಡವಳಿಕೆ ಕಡತಗಳನ್ನು ತರಿಸಿ, ಪರಿಶೀಲಿಸುವ ಮತ್ತು ಪರಿಷ್ಕರಿಸುವ ಅಧಿಕಾರವನ್ನು ಉಳಿಸಿಕೊಂಡು ಈ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ, ಈ ಕೆಳಕಂಡ ರೀತ್ಯಾ ಅಧಿಕಾರ ಪ್ರತ್ಯಾಯೋಜನೆಯನ್ನು ಮಾಡಿ ಆದೇಶಿಸಿದೆ. ಈ ಹಿಂದೆ ಅಧಿಕಾರ ಪ್ರತ್ಯಾಯೋಜನೆ ಕುರಿತು ಹೊರಡಿಸಿರುವ ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಿಸಿದ ಆದೇಶಗಳನ್ನು ಹಿಂಪಡೆಯಲಾಗಿದೆ. ಈ ಅಧಿಕಾರಗಳು ಮುಂದೆ ಪರಿಷ್ಕರಿಸುವ, ಹಿಂತೆಗೆದುಕೊಳ್ಳುವ ಮತ್ತು ಮಾರ್ಪಾಟು ಮಾಡುವವರೆವಿಗೆ ಜಾರಿಯಲ್ಲಿರುತ್ತವೆ. ಈ ಅಧಿಕಾರ ಪ್ರತ್ಯಾಯೋಜನೆಯಲ್ಲಿ ಒಳಗೊಳ್ಳದೇ ಇರುವ ಅಧಿಕಾರಗಳು ಮುಖ್ಯ ಆಯುಕ್ತರವರ ವ್ಯಾಪ್ತಿಗೆ ಒಳಪಡುತ್ತವೆ.

### ಆಡಳಿತ ಶಾಖೆಯ ಆಡಳಿತಾತ್ಮಕ ಅಧಿಕಾರಗಳು:-

| ಕ್ರ. ಸಂ. | ವಿಷಯ | ವಿಶೇಷ ಆಯುಕ್ತರು (ಆಡಳಿತ) | ಉಪ ಆಯುಕ್ತರು (ಆಡಳಿತ) | ವಲಯ ಆಯುಕ್ತರು (ವಲಯ ಮಟ್ಟದಲ್ಲಿ) | ಜಂಟಿ ಆಯುಕ್ತರು (ವಲಯ ಮಟ್ಟದಲ್ಲಿ) | ಉಪ ಆಯುಕ್ತರು (ವಲಯ ಮಟ್ಟದಲ್ಲಿ) | ಷರಾ |
|---|---|---|---|---|---|---|---|
| 1. | 1957ರ ಕ.ಸಿ.ಎಸ್ (ಸಿಸಿಎ) ರೂಲ್ಸ್ ನಿಯಮ-8ರ ಅಡಿ ದಂಡನೆ ವಿಧಿಸುವ ಶಿಸ್ತು ಪ್ರಾಧಿಕಾರಿಗಳು | ಗ್ರೂಪ್ 'ಬಿ' ವೃಂದದ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಲಘು/ಕಠಿಣ ದಂಡನೆ ವಿಧಿಸುವ ಪ್ರಾಧಿಕಾರ | ಕೇಂದ್ರ ಕಛೇರಿ ವ್ಯಾಪ್ತಿಯ ಗ್ರೂಪ್ 'ಸಿ' ಮತ್ತು 'ಡಿ' ವೃಂದದ ಸಿಬ್ಬಂದಿಗಳಿಗೆ ಲಘು/ ಕಠಿಣ ದಂಡನೆ ವಿಧಿಸುವ ಪ್ರಾಧಿಕಾರ | ಗ್ರೂಪ್ 'ಬಿ' ವೃಂದದ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಲಘು/ಕಠಿಣ ದಂಡನೆ ವಿಧಿಸುವ ಪ್ರಾಧಿಕಾರ | ಗ್ರೂಪ್ 'ಸಿ' ಮತ್ತು 'ಡಿ' ವೃಂದದ ಸಿಬ್ಬಂದಿಗಳಿಗೆ ಲಘು/ಕಠಿಣ ದಂಡನೆ ವಿಧಿಸುವ ಪ್ರಾಧಿಕಾರ | -- | — |



Scanned with OKEN Scanner

| ಕ್ರ. ಸಂ. | ವಿಷಯ | ವಿಶೇಷ ಆಯುಕ್ತರು (ಆಡಳಿತ) | ಉಪ ಆಯುಕ್ತರು (ಆಡಳಿತ) | ವಲಯ ಆಯುಕ್ತರು (ವಲಯ ಮಟ್ಟದಲ್ಲಿ) | ಜಂಟಿ ಆಯುಕ್ತರು (ವಲಯ ಮಟ್ಟದಲ್ಲಿ) | ಉಪ ಆಯುಕ್ತರು (ವಲಯ ಮಟ್ಟದಲ್ಲಿ) | ಷರಾ |
|---|---|---|---|---|---|---|---|
| 2. | ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡುವ ಪ್ರಾಧಿಕಾರ | -- | ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡುವ ಸಮಿತಿಯ ಅಧ್ಯಕ್ಷರು, ಸದಸ್ಯರ ಕಾರ್ಯದರ್ಶಿ-ಸಹಾಯಕ ಆಯುಕ್ತರು (ಆಡಳಿತ) | -- | ವಲಯ ಮಟ್ಟದಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡಲು ಕೇಂದ್ರ ಕಛೇರಿಗೆ ಶಿಫಾರಸ್ಸು ಮಾಡಲಾಗುವ ಸಮಿತಿಯ ಅಧ್ಯಕ್ಷರು | ಸದಸ್ಯ ಕಾರ್ಯದರ್ಶಿ | -- |
| 3. | ಮುಂಬಡ್ತಿ ನೀಡುವ ಪ್ರಾಧಿಕಾರ | ಗ್ರೂಪ್ 'ಬಿ' ವೃಂದದ ಹುದ್ದೆಗಳಿಗೆ ನಡೆಸಲಾಗುವ ಇಲಾಖಾ ಬಡ್ತಿ ಸಮಿತಿಯ ಅಧ್ಯಕ್ಷರು | ಗ್ರೂಪ್ 'ಸಿ' ಮತ್ತು 'ಡಿ' ವೃಂದದ ಹುದ್ದೆಗಳಿಗೆ ನಡೆಸಲಾಗುವ ಇಲಾಖಾ ಬಡ್ತಿ ಸಮಿತಿಯ ಅಧ್ಯಕ್ಷರು | -- | -- | -- | -- |
| 4. | ಪರೀಕ್ಷಾರ್ಥ ಸೇವಾವಧಿ ಘೋಷಿಸುವ ಪ್ರಾಧಿಕಾರ | ಗ್ರೂಪ್ 'ಎ' ಮತ್ತು 'ಬಿ' ವೃಂದದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು | ಗ್ರೂಪ್ 'ಸಿ ಮತ್ತು 'ಡಿ' ವೃಂದದ ಸಿಬ್ಬಂದಿಗಳು | -- | -- | -- | -- |
| 5. | ವರ್ಗಾವಣೆ ಮಾಡುವ ಪ್ರಾಧಿಕಾರ | ಗ್ರೂಪ್-'ಬಿ ವೃಂದದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು | ಗ್ರೂಪ್ 'ಸಿ' ಮತ್ತು 'ಡಿ' ವೃಂದದ ಸಿಬ್ಬಂದಿಗಳು | ಗ್ರೂಪ್-'ಬಿ ವೃಂದದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು | ಗ್ರೂಪ್ 'ಸಿ ಮತ್ತು 'ಡಿ' ವೃಂದದ ಸಿಬ್ಬಂದಿಗಳು | -- | -- |
| 6. | ವಲಯ ಹಂತದಲ್ಲಿ ಅಧಿಕಾರಿ/ ನೌಕರರುಗಳು ಮರಣ, ನಿವೃತ್ತಿ, ರಾಜೀನಾಮೆ, ರಜೆ, ಲೋಕಾಯುಕ್ತ ಟ್ರ್ಯಾಪ್ / ದಾಳಿ ಪ್ರಕರಣದಲ್ಲಿ ಪ್ರಭಾರ ಸ್ಥಳ ನಿಯುಕ್ತಿಗೊಳಿಸುವ ಪ್ರಾಧಿಕಾರ | ಗ್ರೂಪ್ 'ಎ' ಮತ್ತು 'ಬಿ' ವೃಂದದ ಅಧಿಕಾರಿಗಳು (ಅಂತರ ವಲಯ ಮತ್ತು ಕೇಂದ್ರ ಕಛೇರಿ ವ್ಯಾಪ್ತಿ) | ಗ್ರೂಪ್ 'ಸಿ' ಮತ್ತು 'ಡಿ' ವೃಂದದ ಸಿಬ್ಬಂದಿಗಳು (ಅಂತರ ವಲಯ ಮತ್ತು ಕೇಂದ್ರ ಕಛೇರಿ ವ್ಯಾಪ್ತಿ) | ಗ್ರೂಪ್ 'ಎ' ಮತ್ತು 'ಬಿ' ವೃಂದದ ಅಧಿಕಾರಿಗಳು | ಗ್ರೂಪ್ 'ಸಿ' ಮತ್ತು 'ಡಿ' ವೃಂದದ ಸಿಬ್ಬಂದಿಗಳು | -- | -- |
| 7. | ಕುಟುಂಬ ನಿವೃತ್ತಿ ವೇತನ ಹಾಗೂ ವಿಶ್ರಾಂತಿ ವೇತನಗಳನ್ನು ಕಾಲ ವಿಳಂಬ ಮನ್ನಾ ಮಾಡಿ ಮಂಜೂರು ಮಾಡುವ ಪ್ರಾಧಿಕಾರ | ಗ್ರೂಪ್ ಎ ಮತ್ತು ಬಿ, ವೃಂದದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು (ಕೇಂದ್ರ ಕಛೇರಿ ವ್ಯಾಪ್ತಿ) | ಗ್ರೂಪ್ 'ಸಿ' ಮತ್ತು 'ಡಿ', ವೃಂದದ ಸಿಬ್ಬಂದಿಗಳು | ಗ್ರೂಪ್ ಎ ಮತ್ತು ಬಿ, ವೃಂದದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು | ಗ್ರೂಪ್ 'ಸಿ' ಮತ್ತು 'ಡಿ', ವೃಂದದ ಸಿಬ್ಬಂದಿಗಳು | -- | -- |
| 8. | ವಾರ್ಷಿಕ ವೇತನ ಬಡ್ತಿ ಮಂಜೂರು ಮಾಡುವ ಪ್ರಾಧಿಕಾರ | ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳು ಸರ್ಕಾರದ ಆದೇಶದನುಸಾರ ಪ್ರತಿ ವರ್ಷದ ಜನವರಿ ಮತ್ತು ಜುಲೈ ತಿಂಗಳುಗಳಲ್ಲಿ ನಿಯಮಾನುಸಾರ ವಾರ್ಷಿಕ ವೇತನ ಬಡ್ತಿ ಮಂಜೂರು ಮಾಡಲು ಕ್ರಮ ಕೈಗೊಳ್ಳುವುದು. | | | | | |



Scanned with OKEN Scanner

| ಕ್ರ. ಸಂ. | ವಿಷಯ | ವಿಶೇಷ ಆಯುಕ್ತರು (ಆಡಳಿತ) | ಉಪ ಆಯುಕ್ತರು (ಆಡಳಿತ) | ವಲಯ ಆಯುಕ್ತರು (ವಲಯ ಮಟ್ಟದಲ್ಲಿ) | ಜಂಟಿ ಆಯುಕ್ತರು (ವಲಯ ಮಟ್ಟದಲ್ಲಿ) | ಉಪ ಆಯುಕ್ತರು (ವಲಯ ಮಟ್ಟದಲ್ಲಿ) | ಷರಾ |
|---|---|---|---|---|---|---|---|
| 9. | ಎರಡು ವರ್ಷ ಹಾಗೂ ಎರಡು ವರ್ಷಗಳಿಗೂ ಮೇಲ್ಪಟ್ಟ ಅವಧಿಗೆ ತಡೆ ಹಿಡಿಯಲಾದ ವಾರ್ಷಿಕ ವೇತನ ಬಡ್ತಿಗಳನ್ನು ಕಾಲ ವಿಳಂಬ ಮನ್ನಾ ಮಾಡಿ ಮಂಜೂರು ಮಾಡುವ ಪ್ರಾಧಿಕಾರ | ಗ್ರೂಪ್ 'ಎ' ಮತ್ತು ಬಿ, ವೃಂದದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು | ಗ್ರೂಪ್ ಸಿ ಮತ್ತು ಡಿ ವೃಂದದ ಸಿಬ್ಬಂದಿಗಳು | ಗ್ರೂಪ್ 'ಎ' ಮತ್ತು ಬಿ, ವೃಂದದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು | ಗ್ರೂಪ್ ಸಿ ಮತ್ತು ಡಿ ವೃಂದದ ಸಿಬ್ಬಂದಿಗಳು | -- | -- |
| 10. | ಅಧಿಕಾರಿ/ನೌಕರರಿಗೆ ಸ್ಥಗಿತ ವೇತನ ಬಡ್ತಿಗಳನ್ನು ಮಂಜೂರು ಮಾಡುವ ಪ್ರಾಧಿಕಾರ | ಗ್ರೂಪ್ 'ಎ' ಮತ್ತು ಬಿ, ವೃಂದದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು | ಗ್ರೂಪ್ ಸಿ ಮತ್ತು ಡಿ ವೃಂದದ ಸಿಬ್ಬಂದಿಗಳು | ಗ್ರೂಪ್ 'ಎ' ಮತ್ತು ಬಿ, ವೃಂದದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು | ಗ್ರೂಪ್ ಸಿ ಮತ್ತು ಡಿ ವೃಂದದ ಸಿಬ್ಬಂದಿಗಳು | - | -- |
| 11. | ಸಂತಾನಹರಣ ಶಸ್ತ್ರಚಿಕಿತ್ಸೆಗೆ ಒಳಪಟ್ಟಲ್ಲಿ ವಿಶೇಷ ವೈಯುಕ್ತಿಕ ವೇತನ ಬಡ್ತಿ ಮಂಜೂರಾತಿ ನೀಡುವ ಪ್ರಾಧಿಕಾರ | ಗ್ರೂಪ್ 'ಎ' ಮತ್ತು ಬಿ, ವೃಂದದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು | ಗ್ರೂಪ್ ಸಿ ಮತ್ತು ಡಿ ವೃಂದದ ಸಿಬ್ಬಂದಿಗಳು | ಗ್ರೂಪ್ 'ಎ' ಮತ್ತು ಬಿ, ವೃಂದದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು | ಗ್ರೂಪ್ ಸಿ ಮತ್ತು ಡಿ ವೃಂದದ ಸಿಬ್ಬಂದಿಗಳು | - | -- |
| 12. | ಮಹಿಳಾ ನೌಕರರಿಗೆ ಗರ್ಭಪಾತ, ಹೆರಿಗೆ ರಜೆ ಹಾಗೂ ಪುರುಷ ನೌಕರರಿಗೆ ಪಿತೃತ್ವ ರಜೆ, ಶಿಶುಪಾಲನಾ ರಜೆ ಮಂಜೂರು ಮಾಡುವ ಪ್ರಾಧಿಕಾರ | -- | -- | -- | -- | -- | ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳು |
| 13. | ಸಾಂಧರ್ಭಿಕ ರಜೆ ಮಂಜೂರು ಮಾಡುವ ಪ್ರಾಧಿಕಾರ | ಗ್ರೂಪ್ 'ಎ' ಮತ್ತು ಬಿ, ವೃಂದದ ಅಧಿಕಾರಿಗಳಿಗೆ ತಮ್ಮ ಇಲಾಖೆಯ ತತ್ ತಕ್ಷಣದ ಉನ್ನತ ಅಧಿಕಾರಿಗಳು | | | | | ಗ್ರೂಫ್ 'ಸಿ' ಮತ್ತು 'ಡಿ ವೃಂದದ ನೌಕರರುಗಳಿಗೆ ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳು |
| 14. | ಅಧಿಕಾರಿ ನೌಕರರಿಗೆ 30 ದಿನಗಳ ಗಳಿಕೆ / ಅರ್ಧ ವೇತನ/ ಪರಿವರ್ತಿತ ರಜೆಯನ್ನು ಮಂಜೂರು ಮಾಡುವ ಪ್ರಾಧಿಕಾರ | -- | ಗ್ರೂಪ್ 'ಎ' ಮತ್ತು 'ಬಿ' ವೃಂದದ ಅಧಿಕಾರಿ / ಸಿಬ್ಬಂದಿಗಳು | ಗ್ರೂಪ್ 'ಎ' ವೃಂದದ ಅಧಿಕಾರಿಗಳು | ಗ್ರೂಪ್ ಬಿ, ಸಿ ಮತ್ತು ಡಿ ವೃಂದದ ಸಿಬ್ಬಂದಿಗಳು | - | ಗ್ರೂಫ್ 'ಸಿ' ಮತ್ತು 'ಡಿ, ವೃಂದದ ನೌಕರರುಗಳಿಗೆ 'ಸಂದರ್ಭಾನುಸಾರ ಸಂಬಂಧಪಟ್ಟ ಇಲಾಖಾ / ಕಛೇರಿ ಮುಖ್ಯಸ್ಥರು |
| 15. | ಅಧಿಕಾರಿ/ನೌಕರರಿಗೆ 31 ದಿನಗಳಿಗೂ ಹೆಚ್ಚಿನ 120 ದಿನಗಳ ವರೆಗೆ ಗಳಿಕೆ / ಅರ್ಧ ವೇತನ/ ಪರಿವರ್ತಿತ | ಗ್ರೂಪ್ ಬಿ ವೃಂದದ ಅಧಿಕಾರಿ / ಸಿಬ್ಬಂದಿಗಳು | ಗ್ರೂಪ್ ಸಿ ಮತ್ತು ಡಿ ವೃಂದದ ಸಿಬ್ಬಂದಿಗಳು | ಗ್ರೂಪ್ ಬಿ ವೃಂದದ ಅಧಿಕಾರಿ / ಸಿಬ್ಬಂದಿಗಳು | ಗ್ರೂಪ್ ಸಿ ಮತ್ತು ಡಿ ವೃಂದದ ಸಿಬ್ಬಂದಿಗಳು | - | ಗ್ರೂಪ್ ಎ ವೃಂದದ ಅಧಿಕಾರಿಗಳಿಗೆ ಮಾನ್ಯ ಮುಖ್ಯ ಆಯುಕ್ತರು |



Scanned with OKEN Scanner

| ಕ್ರ. ಸಂ. | ವಿಷಯ | ವಿಶೇಷ ಆಯುಕ್ತರು (ಆಡಳಿತ) | ಉಪ ಆಯುಕ್ತರು (ಆಡಳಿತ) | ವಲಯ ಆಯುಕ್ತರು (ವಲಯ ಮಟ್ಟದಲ್ಲಿ) | ಜಂಟಿ ಆಯುಕ್ತರು (ವಲಯ ಮಟ್ಟದಲ್ಲಿ) | ಉಪ ಆಯುಕ್ತರು (ವಲಯ ಮಟ್ಟದಲ್ಲಿ) | ಷರಾ |
|---|---|---|---|---|---|---|---|
| | ರಜೆಯನ್ನು ಮಂಜೂರು ಮಾಡುವ ಪ್ರಾಧಿಕಾರ | | | | | | |
| 16. | 30 ದಿನಗಳ ವರೆಗೆ ಅಧಿಕಾರಿ / ನೌಕರರಿಗೆ ಕಡ್ಡಾಯ ನಿರೀಕ್ಷಣಾ ಅವಧಿ ಮಂಜೂರು ಮಾಡುವ ಪ್ರಾಧಿಕಾರ | -- | ಗ್ರೂಪ್ ಎ, ಬಿ, ಸಿ ಮತ್ತು ಡಿ ವೃಂದದ ಅಧಿಕಾರಿ / ಸಿಬ್ಬಂದಿಗಳು | -- | -- | -- | 30 ದಿನಗಳ ಮೇಲ್ಪಟ್ಟಂತೆ ಮಾನ್ಯ ಮುಖ್ಯ ಆಯುಕ್ತರು |
| 17. | ಅಧಿಕಾರಿ ನೌಕರರಿಗೆ 15 ದಿನಗಳ ಗಳಿಕೆ ರಜೆ ನಗಧೀಕರಿಸಲು ಮಂಜೂರಾತಿ ನೀಡುವ ಪ್ರಾಧಿಕಾರ | ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳು ಸರ್ಕಾರದ ಆದೇಶದನುಸಾರ / ಪಾಲಿಕೆಯ ಆದೇಶದನುಸಾರ 15 ದಿನಗಳ ಗಳಿಕೆ ರಜೆ ನಗಧೀಕರಣ ಸೌಲಭ್ಯವನ್ನು ಮಂಜೂರು ಮಾಡಲು ನಿಯಮಾನುಸಾರ ಕ್ರಮ ಕೈಗೊಳ್ಳುವುದು. | | | | | |
| 18. | ನಿವೃತ್ತಿ / ಮರಣ ಹೊಂದುವ ನೌಕರರ ಹಕ್ಕಿನಲ್ಲಿರುವ ಗಳಿಗೆ ರಜೆಯನ್ನು ನಗಧೀಕರಿಸಲು ಮಂಜೂರು ಮಾಡುವ ಪ್ರಾಧಿಕಾರ | ಗ್ರೂಪ್ ಎ ಮತ್ತು ಗ್ರೂಪ್ ಬಿ ವೃಂದದ ಅಧಿಕಾರಿ / ಸಿಬ್ಬಂದಿಗಳು | ಗ್ರೂಪ್ ಸಿ ಮತ್ತು ಡಿ ವೃಂದದ ಸಿಬ್ಬಂದಿಗಳು | ಗ್ರೂಪ್ ಎ ಮತ್ತು ಗ್ರೂಪ್ ಬಿ ವೃಂದದ ಅಧಿಕಾರಿ/ಸಿಬ್ಬಂದಿಗಳು | ಗ್ರೂಪ್ ಸಿ ಮತ್ತು ಡಿ ವೃಂದದ ಸಿಬ್ಬಂದಿಗಳು | -- | -- |
| 19. | ಅನಧೀಕೃತವಾಗಿ ಗೈರು ಹಾಜರಾಗುವ ಅಧಿಕಾರಿ / ನೌಕರರುಗಳ ವಿರುದ್ಧ ಶಿಸ್ತಿನ ಕ್ರಮಜರುಗಿಸುವ ಪ್ರಾಧಿಕಾರ | ಗ್ರೂಪ್ ಎ ಮತ್ತು ಗ್ರೂಪ್ ಬಿ ವೃಂದದ ಅಧಿಕಾರಿ / ಸಿಬ್ಬಂದಿಗಳು | ಗ್ರೂಪ್ ಸಿ ಮತ್ತು ಡಿ ವೃಂದದ ಸಿಬ್ಬಂದಿಗಳು | ಗ್ರೂಪ್ ಎ ಮತ್ತು ಗ್ರೂಪ್ ಬಿ ವೃಂದದ ಅಧಿಕಾರಿ/ಸಿಬ್ಬಂದಿಗಳು | ಗ್ರೂಪ್ ಸಿ ಮತ್ತು ಡಿ ವೃಂದದ ಸಿಬ್ಬಂದಿಗಳು | | ಗ್ರೂಪ್ ಎ ಮತ್ತು ಬಿ ವೃಂದಗಳಿಗೆ ಅಪೀಲು ಪ್ರಾಧಿಕಾರ ಮಾನ್ಯ ಮುಖ್ಯ ಆಯುಕ್ತರು ಮತ್ತು ಗ್ರೂಪ್ ಸಿ ಮತ್ತು ಡಿ ವೃಂದಗಳಿಗೆ ವಿಶೇಷ ಆಯುಕ್ತರು (ಆಡಳಿತ)/ವಲಯ ಆಯುಕ್ತರು |
| 20. | ಅಧಿಕಾರಿ/ನೌಕರರುಗಳಿಗೆ ನಗರ ಪಾಲಿಕೆ ವತಿಯಿಂದ ಗೃಹ ನಿರ್ಮಾಣ ಮುಂಗಡ / ವಾಹನ ಮುಂಗಡ ಮಂಜೂರಾತಿಗೆ ಅನುಮತಿ ನೀಡುವ ಪ್ರಾಧಿಕಾರ | ಗ್ರೂಪ್ ಎ ಮತ್ತು ಗ್ರೂಪ್ ಬಿ ವೃಂದದ ಅಧಿಕಾರಿ/ಸಿಬ್ಬಂದಿಗಳು | ಗ್ರೂಪ್ ಸಿ ಮತ್ತು ಡಿ ವೃಂದದ ಸಿಬ್ಬಂದಿಗಳು | ಗ್ರೂಪ್ ಎ ಮತ್ತು ಗ್ರೂಪ್ ಬಿ ವೃಂದದ ಅಧಿಕಾರಿ/ಸಿಬ್ಬಂದಿಗಳು | ಗ್ರೂಪ್ ಸಿ ಮತ್ತು ಡಿ ವೃಂದದ ಸಿಬ್ಬಂದಿಗಳು | -- | -- |
| 21. | ಅಧಿಕಾರಿ / ನೌಕರರುಗಳಿಗೆ ಹಬ್ಬದ ಮುಂಗಡ ಮಂಜೂರಾತಿ ಮಾಡುವ ಅಧಿಕಾರ | ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳು ಸರ್ಕಾರದ ಆದೇಶದನುಸಾರ / ಪಾಲಿಕೆಯ ಆದೇಶದನುಸಾರ ಹಬ್ಬದ ಮುಂಗಡ ಹಣದ ಸೌಲಭ್ಯವನ್ನು ಮಂಜೂರು ಮಾಡಲು ನಿಯಮಾನುಸಾರ ಕ್ರಮ ಕೈಗೊಳ್ಳುವುದು. | | | | | |



Scanned with OKEN Scanner

| ಕ್ರ. ಸಂ. | ವಿಷಯ | ವಿಶೇಷ ಆಯುಕ್ತರು (ಆಡಳಿತ) | ಉಪ ಆಯುಕ್ತರು (ಆಡಳಿತ) | ವಲಯ ಆಯುಕ್ತರು (ವಲಯ ಮಟ್ಟದಲ್ಲಿ) | ಜಂಟಿ ಆಯುಕ್ತರು (ವಲಯ ಮಟ್ಟದಲ್ಲಿ) | ಉಪ ಆಯುಕ್ತರು (ವಲಯ ಮಟ್ಟದಲ್ಲಿ) | ಷರಾ |
|---|---|---|---|---|---|---|---|
| 22. | ಅಧಿಕಾರಿ / ನೌಕರರುಗಳಿಗೆ ವಯೋನಿವೃತ್ತಿ ಹೊಂದಲು ಅನುಮತಿ ನೀಡುವ ಅಧಿಕಾರ | ಗ್ರೂಪ್ ಎ ಮತ್ತು ಗ್ರೂಪ್ ಬಿ ವೃಂದದ ಅಧಿಕಾರಿ/ಸಿಬ್ಬಂದಿಗಳು | ಗ್ರೂಪ್ ಸಿ ಮತ್ತು ಡಿ ವೃಂದದ ಸಿಬ್ಬಂದಿಗಳು | ಗ್ರೂಪ್ ಬಿ ವೃಂದದ ಅಧಿಕಾರಿ/ಸಿಬ್ಬಂದಿಗಳು | ಗ್ರೂಪ್ ಸಿ ಮತ್ತು ಡಿ ವೃಂದದ ಸಿಬ್ಬಂದಿಗಳು | -- | -- |
| 23. | ನೌಕರರಿಗೆ ಸ್ಥಿರ/ಚರ ಆಸ್ತಿ ಖರೀದಿ, ಸಾಲ ಪಡೆಯಲು ಅನುಮತಿ ನೀಡುವ ಅಧಿಕಾರ | ಗ್ರೂಪ್ ಬಿ, ಸಿ ಮತ್ತು ಡಿ ವೃಂದದ ಸಿಬ್ಬಂದಿಗಳು | -- | ಗ್ರೂಪ್ ಬಿ, ಸಿ ಮತ್ತು ಡಿ ವೃಂದದ ಸಿಬ್ಬಂದಿಗಳು | -- | -- | ಗ್ರೂಪ್ ಎ ವೃಂದದ ಅಧಿಕಾರಿಗಳಿಗೆ ಮಾನ್ಯ ಮುಖ್ಯ ಆಯುಕ್ತರು |
| 24. | ಆಸ್ತಿ ಮತ್ತು ಋಣಭಾರ ಪಟ್ಟಿಯನ್ನು ನಿರ್ವಹಣೆ ಅಧಿಕಾರಿ | ಗ್ರೂಪ್ ಬಿ, ಸಿ ಮತ್ತು ಡಿ ವೃಂದದ ಸಿಬ್ಬಂದಿಗಳು | -- | ಗ್ರೂಪ್ ಬಿ, ಸಿ ಮತ್ತು ಡಿ ವೃಂದದ ಸಿಬ್ಬಂದಿಗಳು | -- | -- | ಗ್ರೂಪ್ ಎ ವೃಂದದ್ಧ ಅಧಿಕಾರಿಗಳಿಗೆ ಮಾನ್ಯ ಮುಖ್ಯ ಆಯುಕ್ತರು |
| 25. | ವೈದ್ಯಕೀಯ ವೆಚ್ಚ ಮರುಪಾವತಿ ಮಂಜೂರಾತಿ ಅಧಿಕಾರ | ಗ್ರೂಪ್ ಎ ಮತ್ತು ಗ್ರೂಪ್ ಬಿ ವೃಂದದ ಅಧಿಕಾರಿ/ಸಿಬ್ಬಂದಿಗಳು ರೂ.3.00 ಲಕ್ಷಗಳವರೆಗೆ | ಗ್ರೂಪ್ ಸಿ ಮತ್ತು ಡಿ ವೃಂದದ ಸಿಬ್ಬಂದಿಗಳು ರೂ.2.00 ಲಕ್ಷಗಳವರೆಗೆ | ಗ್ರೂಪ್ ಎ ಮತ್ತು ಗ್ರೂಪ್ ಬಿ ವೃಂದದ ಅಧಿಕಾರಿ/ಸಿಬ್ಬಂದಿಗಳು ರೂ.3.00 ಲಕ್ಷಗಳವರೆಗೆ | ಗ್ರೂಪ್ ಸಿ ಮತ್ತು ಡಿ ವೃಂದದ ಸಿಬ್ಬಂದಿಗಳು ರೂ.2.00 ಲಕ್ಷಗಳವರೆಗೆ | -- | ಹೆಚ್ಚಿನ ಮೊತ್ತಕ್ಕೆ ಮುಖ್ಯ ಆಯುಕ್ತರಿಗೆ ಪ್ರಸ್ತಾವನೆ ಸಲ್ಲಿಸುವುದು |
| 26. | ಉನ್ನತ ವ್ಯಾಸಂಗಕ್ಕಾಗಿ ಅನುಮತಿಸುವ ಅಧಿಕಾರ | ಗ್ರೂಪ್ ಎ ಮತ್ತು ಗ್ರೂಪ್ ಬಿ ವೃಂದದ ಅಧಿಕಾರಿ/ಸಿಬ್ಬಂದಿಗಳು | ಗ್ರೂಪ್ ಸಿ ಮತ್ತು ಡಿ ವೃಂದದ ಸಿಬ್ಬಂದಿಗಳು | -- | -- | -- | ಕರ್ನಾಟಕ ನಾಗರಿಕ ಸೇವಾ ನಿಯಮ 61.(1)(ಎ)ರ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾನ್ಯ ಮುಖ್ಯ ಆಯುಕ್ತರು |
| 27. | ಪಾಸ್‌ಪೋರ್ಟ್ ಮತ್ತು ಬೇರ ಇಲಾಖೆಗಳಲ್ಲಿ ನೇಮಕಾತಿ ಕೋರಿ ಸಲ್ಲಿಸುವ ಸಂಬಂಧ ನಿರಾಕ್ಷೇಪಣಾ ಪ್ರಮಾಣ ಪತ್ರ ಅನುಮತಿಸುವ ಅಧಿಕಾರ | ಗ್ರೂಪ್ ಎ ಮತ್ತು ಗ್ರೂಪ್ ಬಿ ವೃಂದದ ಅಧಿಕಾರಿ/ಸಿಬ್ಬಂದಿಗಳು | ಗ್ರೂಪ್ ಸಿ ಮತ್ತು ಡಿ ವೃಂದದ ಸಿಬ್ಬಂದಿಗಳು | ಗ್ರೂಪ್ ಎ ಮತ್ತು ಗ್ರೂಪ್ ಬಿ ವೃಂದದ ಅಧಿಕಾರಿ/ಸಿಬ್ಬಂದಿಗಳು | ಗ್ರೂಪ್ ಸಿ ಮತ್ತು ಡಿ ವೃಂದದ ಸಿಬ್ಬಂದಿಗಳು | -- | -- |
| 28. | ವಿದೇಶ ಪ್ರವಾಸ ಕೈಗೊಳ್ಳುವ ಅಧಿಕಾರಿ / ನೌಕರರಿಗೆ ಅನುಮತಿ ನೀಡುವ ಪ್ರಾಧಿಕಾರ | ಗ್ರೂಪ್ ಎ ಮತ್ತು ಗ್ರೂಪ್ ಬಿ ವೃಂದದ ಅಧಿಕಾರಿ/ಸಿಬ್ಬಂದಿಗಳು | ಗ್ರೂಪ್ ಸಿ ಮತ್ತು ಡಿ ವೃಂದದ ಸಿಬ್ಬಂದಿಗಳು | ಗ್ರೂಪ್ ಎ ಮತ್ತು ಗ್ರೂಪ್ ಬಿ ವೃಂದದ ಅಧಿಕಾರಿ/ಸಿಬ್ಬಂದಿಗಳು | ಗ್ರೂಪ್ ಸಿ ಮತ್ತು ಡಿ ವೃಂದದ ಸಿಬ್ಬಂದಿಗಳು | -- | -- |
| 29. | 10-ವರ್ಷಗಳ ಕಾಲಮಿತಿ ವೇತನ ಬಡ್ತಿ, 15-ವರ್ಷಗಳ ವಿಶೇಷ ಕಾಲಮಿತಿ ವೇತನ ಶ್ರೇಣಿ, 20 ವರ್ಷಗಳ ಹೆಚ್ಚುವರಿ ಮತ್ತು 25 ಮತ್ತು 30 ವರ್ಷಗಳ ಅಧಿಕ ವೇತನ ಬಡ್ತಿ ಮಂಜೂರು ಮಾಡುವ ಅಧಿಕಾರ | ಗ್ರೂಪ್ 'ಎ' ವೃಂದದ ಅಧಿಕಾರಿ | ಗ್ರೂಪ್-'ಬಿ' 'ಸಿ' ಮತ್ತು ಡಿ ವೃಂದದ ಅಧಿಕಾರಿ / ಸಿಬ್ಬಂದಿಗಳು | ಗ್ರೂಪ್ 'ಎ' ವೃಂದದ ಅಧಿಕಾರಿ | ಗ್ರೂಪ್-'ಬಿ' 'ಸಿ' ಮತ್ತು ಡಿ ವೃಂದದ ಅಧಿಕಾರಿ / ಸಿಬ್ಬಂದಿಗಳು | -- | -- |



Scanned with OKEN Scanner

| ಕ್ರ. ಸಂ. | ವಿಷಯ | ವಿಶೇಷ ಆಯುಕ್ತರು (ಆಡಳಿತ) | ಉಪ ಆಯುಕ್ತರು (ಆಡಳಿತ) | ವಲಯ ಆಯುಕ್ತರು (ವಲಯ ಮಟ್ಟದಲ್ಲಿ) | ಜಂಟಿ ಆಯುಕ್ತರು (ವಲಯ ಮಟ್ಟದಲ್ಲಿ) | ಉಪ ಆಯುಕ್ತರು (ವಲಯ ಮಟ್ಟದಲ್ಲಿ) | ಷರಾ |
|---|---|---|---|---|---|---|---|
| 30. | ಲೇಖನ ಸಾಮಗ್ರಿಗಳ ಖರೀದಿ ಹಾಗೂ ಗಣಕಯಂತ್ರ /ಪ್ರಿಂಟರ್, ಸ್ಕ್ಯಾನರ್ ಫ್ಯಾಕ್ಸ್ /ದೂರವಾಣಿ / ಜೆರಾಕ್ಸ್ ಯಂತ್ರಗಳ ಖರೀದಿಗಾಗಿ ಹಾಗೂ ದುರಸ್ಥಿ ಕಾರ್ಯಗಳಿಗೆ ಅನುಮೋದನೆ ಮತ್ತು ವಾರ್ಷಿಕ ನಿರ್ವಹಣೆಯ ಗುತ್ತಿಗೆ ನೀಡಲು ಅನುಮೋದನೆ | 1.00 ಲಕ್ಷಕ್ಕಿಂತ ಮೇಲ್ಪಟ್ಟು ಸಂಪೂರ್ಣ ಅಧಿಕಾರ | 1.00 ಲಕ್ಷಗಳ ವರೆಗೆ (ಡಿ.ಸಿ ಬಿಲ್ ಮೇಲು ರುಜು ಮಾಡುವ ಸಂಪೂರ್ಣ ಅಧಿಕಾರ ( ಉಪ ಆಯುಕ್ತರು (ಆಡಳಿತ)) | 1.00 ಲಕ್ಷಕ್ಕಿಂತ ಮೇಲ್ಪಟ್ಟು ಸಂಪೂರ್ಣ ಅಧಿಕಾರ | 1.00 ಲಕ್ಷಗಳ ವರೆಗೆ | -- | -- |
| 31. | ಕಂದಾಯ ಅಧಿಕಾರಿ (ಉಗ್ರಾಣ ಮತ್ತು ದಸ್ತಾವೇಜು) ಇಲಾಖೆ ಮುಖಾಂತರ ನಿರ್ವಹಿಸಲಾಗುವ ಮುದ್ರಿತ ಸಾಮಗ್ರಿಗಳಿಗೆ ಅನುಮೋದನೆ | 1.00 ಲಕ್ಷಕ್ಕಿಂತ ಮೇಲ್ಪಟ್ಟು ಸಂಪೂರ್ಣ ಅಧಿಕಾರ | 1.00 ಲಕ್ಷಗಳ ವರೆಗೆ | -- | -- | -- | ಡಿ.ಸಿ ಬಿಲ್ ಮೇಲು ರುಜು ಮಾಡುವ ಸಂಪೂರ್ಣ ಅಧಿಕಾರ ( ಉಪ ಆಯುಕ್ತರು (ಆಡಳಿತ) |
| 32. | ಸಾರ್ವಜನಿಕ ಸಂಪರ್ಕಾಧಿಕಾರಿ ಕಛೇರಿ ಮುಖಾಂತರ ನಿರ್ವಹಿಸಲಾಗುವ ಆಡಳಿತ, ಸಭೆ, ಸಮಾರಂಭಗಳು ಹಾಗೂ ಇತರ ಆಡಳಿತಾತ್ಮಕ ವೆಚ್ಚಗಳ ಅನುಮೋದನೆ | 5.00 ಲಕ್ಷಕ್ಕಿಂತ ಮೇಲ್ಪಟ್ಟು ಸಂಪೂರ್ಣ ಅಧಿಕಾರ | 5.00 ಲಕ್ಷಗಳವರೆಗೆ | -- | -- | -- | ಡಿ.ಸಿಬಿಲ್ಮೇಲುರುಜುಮಾಡುವಸಂಪೂರ್ಣಅಧಿಕಾರ ( ಉಪಆಯುಕ್ತರು (ಆಡಳಿತ) |
| 33. | ಸಾರ್ವಜನಿಕ ಸಂಪರ್ಕಾಧಿಕಾರಿ ಕಛೇರಿ ಮುಖಾಂತರ ಹೊರಡಿಸಲಾಗುವ ಜಾಹೀರಾತು ವೆಚ್ಚದ ಆಡಳಿತಾತ್ಮಕ ಅನುಮೋದನೆ | 5.00 ಲಕ್ಷಕ್ಕಿಂತ ಮೇಲ್ಪಟ್ಟು ಸಂಪೂರ್ಣ ಅಧಿಕಾರ | 5.00 ಲಕ್ಷಗಳವರೆಗೆ | -- | -- | -- | ಡಿ.ಸಿಬಿಲ್ಮೇಲುರುಜುಮಾಡುವಸಂಪೂರ್ಣಅಧಿಕಾರ ( ಉಪಆಯುಕ್ತರು (ಆಡಳಿತ) |
| 34. | ವಾಹನ ಗುತ್ತಿಗೆಗೆ ಪಡೆಯಲು ನಿಯಮನುಸಾರ ಅರ್ಹರಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಅಧಿಕಾರ | ಸಂಪೂರ್ಣ ಅಧಿಕಾರ ಕೇಂದ್ರ ಕಛೇರಿಯ ಸಂಬಧಿಸಿದಂತೆ | -- | ಸಂಪೂರ್ಣ ಅಧಿಕಾರ ವಲಯ ಕಛೇರಿಯ ಸಂಬಧಿಸಿದಂತೆ | -- | -- | -- |
| 35. | ವಾಹನ ದುರಸ್ತಿಗೆ ಸಂಬಂಧಪಟ್ಟಂತೆ ಆಡಳಿತಾತ್ಮಕ ಮಂಜೂರಾತಿ ನೀಡುವ ಅಧಿಕಾರ | ಸಂಪೂರ್ಣ ಅಧಿಕಾರ | 50,000 (ಪ್ರತಿ ಬಾರಿಗೆ) | ಸಂಪೂರ್ಣ ಅಧಿಕಾರ | 50,000 (ಪ್ರತಿ ಬಾರಿಗೆ) | -- | -- |
| 36. | ವಾಹನ ಭತ್ಯೆ ಮಂಜೂರಾತಿ ನೀಡುವ ಅಧಿಕಾರ | ಸಂಪೂರ್ಣ ಅಧಿಕಾರ | -- | -- | -- | -- | -- |
| 37. | ಸಾದಿಲ್ವಾರು ವೆಚ್ಚಗಳಿಗೆ ಸಂಬಂಧಿಸಿದಂತೆ, ಹಣವನ್ನು ವಲಯ ಲೆಕ್ಕಾಧಿಕಾರಿಗಳಿಂದ ಪಡೆದು ನಿರ್ವಹಿಸುವ ಅಧಿಕಾರ | ಸಂಪೂರ್ಣ ಅಧಿಕಾರ | -- | ಸಂಪೂರ್ಣ ಅಧಿಕಾರ | - | - | -- |
| 38. | ವಲಯ ಆಯುಕ್ತರು ಕಛೇರಿಗೆ ಆಡಳಿತಾತ್ಮಕ ವೆಚ್ಚ/ಲೇಖನ | -- | -- | 10 ಲಕ್ಷ ರೂಪಾಯಿವರೆಗೆ (ಆಯವ್ಯಯದಲ್ಲಿ | -- | -- | ಕೇಂದ್ರ ಕಛೇರಿಗೆ |



Scanned with OKEN Scanner

| ಕ್ರ. ಸಂ. | ವಿಷಯ | ವಿಶೇಷ ಆಯುಕ್ತರು (ಆಡಳಿತ) | ಉಪ ಆಯುಕ್ತರು (ಆಡಳಿತ) | ವಲಯ ಆಯುಕ್ತರು (ವಲಯ ಮಟ್ಟದಲ್ಲಿ) | ಜಂಟಿ ಆಯುಕ್ತರು (ವಲಯ ಮಟ್ಟದಲ್ಲಿ) | ಉಪ ಆಯುಕ್ತರು (ವಲಯ ಮಟ್ಟದಲ್ಲಿ) | ಷರಾ |
|---|---|---|---|---|---|---|---|
| | ಸಾಮಗ್ರಿಗಳ ಖರೀದಿ ಹಾಗೂ ಗಣಕಯಂತ್ರ /ಪ್ರಿಂಟರ್. ಸ್ಕ್ಯಾನರ್ ಫ್ಯಾಕ್ಸ್ /ದೂರವಾಣಿ / ಜೆರಾಕ್ಸ್ ಯಂತ್ರಗಳ ಖರೀದಿಗಾಗಿ ಹಾಗೂ ದುರಸ್ಥಿ ಕಾರ್ಯಗಳಿಗೆ ಅನುಮೋದನೆ ಮತ್ತು ವಾರ್ಷಿಕ ನಿರ್ವಹಣೆ ಸರಬರಾಜು / ಗುತ್ತಿಗೆ ನೀಡಲು ಅನುಮೋದನೆ | | | ಅನುಮೋದನೆಗೊಂಡು ಮಿಸಲಿರಿಸಿರುವ ಅನುದಾನಕ್ಕೆ ಸಿಮಿತವಾಗಿ) | | | ಸಂಬಂಧಿಸಿದಂತೆ 25.00 ಲಕ್ಷ ವರೆಗೆ ವಿಶೇಷ ಆಯುಕ್ತರು (ಐ.ಟಿ) ರವರಿಗೆ ನೀಡಿದೆ. (ಆಯವ್ಯಯದಲ್ಲಿ ಅನುಮೋದನೆಗೊಂಡು ಮಿಸಲಿರಿಸಿರುವ ಅನುದಾನಕ್ಕೆ ಸಿಮಿತವಾಗಿ) |
| 39. | ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ಪ್ರಕಾರ ಪಿಂಚಣಿ ಉದ್ದೇಶಕ್ಕಾಗಿ ಅರ್ಹತಾದಾಯಕ ಸೇವೆಯನ್ನು ಪರಿಗಣಿಸುವ ಅಧಿಕಾರ | ಗ್ರೂಪ್ 'ಎ' ವೃಂದದ ಅಧಿಕಾರಿಗಳು | ಗ್ರೂಪ್ 'ಬಿ', 'ಸಿ' ಮತ್ತು 'ಡಿ' ವೃಂದದ ಅಧಿಕಾರಿ / ಸಿಬ್ಬಂದಿಗಳು | -- | -- | -- | -- |
| 40. | ಪ್ರಭಾರ ಭತ್ಯೆಯನ್ನು ಮಂಜೂರು ಮಾಡುವ ಪ್ರಾಧಿಕಾರ | ಗ್ರೂಪ್ 'ಎ' ವೃಂದದ ಅಧಿಕಾರಿಗಳು | ಗ್ರೂಪ್ 'ಬಿ' 'ಸಿ' ಮತ್ತು 'ಡಿ' ವೃಂದದ ಅಧಿಕಾರಿ / ಸಿಬ್ಬಂದಿಗಳು | ಗ್ರೂಪ್ 'ಎ' ವೃಂದದ ಅಧಿಕಾರಿಗಳು | ಗ್ರೂಪ್ 'ಬಿ' 'ಸಿ' ಮತ್ತು 'ಡಿ' ವೃಂದದ ಅಧಿಕಾರಿ / ಸಿಬ್ಬಂದಿಗಳು | -- | ಪ್ರಭಾರ ವ್ಯವಸ್ಥೆಯು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ಪ್ರಕರಣಗಳಲ್ಲಿ ಮಾತ್ರ ಸೀಮಿತವಾಗಿ |
| ಮಾನ್ಯ ಮುಖ್ಯ ಆಯುಕ್ತರು ಹಾಗೂ ವಿಶೇಷ ಆಯುಕ್ತರು (ಆಡಳಿತ) ರವರ ಅನುಮೋದನೆ ನಂತರ ಉಪಆಯುಕ್ತರು (ಆಡಳಿತ) ರವರಿಗೆ ಕಛೇರಿ ಆದೇಶಗಳನ್ನು ಹೊರಡಿಸುವ ಅಧಿಕಾರ ಪ್ರತ್ಯಾಯೋಜಿಸಿದೆ. | | | | | | | |
| ವಲಯ ಮಟ್ಟದಲ್ಲಿ ವಲಯ ಆಯುಕ್ತರವರ ಅನುಮೋದನೆಯ ನಂತರ ವಲಯ ಜಂಟಿ ಆಯುಕ್ತರು ಕಛೇರಿ ಆದೇಶಗಳನ್ನು ಹೊರಡಿಸುವ ಅಧಿಕಾರ ಪ್ರತ್ಯಾಯೋಜಿಸಿದೆ. | | | | | | | |

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ರವರುಗಳಿಗೆ,**

1. ಮಾನ್ಯ ಆಡಳಿತಗಾರರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿ ರವರಿಗೆ ಕಳುಹಿಸಿದೆ.
2. ವಿಶೇಷ ಆಯುಕ್ತರು (ಆಡಳಿತ)/ (ಹಣಕಾಸು / ಯೋಜನೆ / ಆರೋಗ್ಯ / ಕಂದಾಯ / ಆಸ್ತಿಗಳು / ಕಲ್ಯಾಣ/ ಘನತ್ಯಾಜ್ಯ ನಿರ್ವಹಣೆ) ರವರುಗಳಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.



Scanned with OKEN Scanner